ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ     ದಿನಾಂಕ : DATE : 22/3/21

**ಮಾಜಿ ಸಿಎಂ ಸಿದ್ದರಾಮಯ್ಯ ಪ್ರಶ್ನೆ | ಎಚ್.ಎಂ. ರೇವಣ್ಣ ಅಭಿನಂದನಾ ಗ್ರಂಥ ಬಿಡುಗಡೆ**

# ಪೆಟ್ರೋಲ್ ಬೆಲೆ 100 ರು. ಆದರೂ ಇನ್ನೂ ಜನ ಯಾಕೆ ಪ್ರತಿಭಟಿಸುತ್ತಿಲ್ಲ?

ವಿಶ್ವ 22/3/21

**ಬೆಂಗಳೂರು:** ದೇಶದಲ್ಲಿ ಪೆಟ್ರೋಲ್ ಬೆಲೆ ನೂರು ರೂಪಾಯಿಗೆ ಏರಿಕೆಯಾಗಿದ್ದರೂ ಜನ ಪ್ರತಿಭಟನೆ ನಡೆಸುತ್ತಿಲ್ಲ. ಇದು ದೇಶದ ದುರಂತ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದ್ದಾರೆ.

ಎಚ್.ಎಂ. ರೇವಣ್ಣ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಎಚ್.ಎಂ.ರೇವಣ್ಣ ಅಭಿನಂದನಾ ಗ್ರಂಥ ಬಿಡುಗಡೆ ಮಾಡಿ ಮಾತನಾಡಿದ ಅವರು, ಜನರ ಸಮಸ್ಯೆ ಬಗೆಹರಿಸುವುದಾಗಿ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ಜನತೆಗೆ ಟೋಪಿ ಹಾಕಿದ್ದಾರೆ. ಇಷ್ಟಾದರೂ ಜನ ಪ್ರತಿಭಟನೆ ಮಾಡುತ್ತಿಲ್ಲ. ಜನತೆಯಲ್ಲಿ ಹೋರಾಟದ ಮನೋಭಾವನೆ ಸತ್ತುಹೋಗಿದೆ ಎಂದರು.

ಭ್ರಷ್ಟಾಚಾರ ಈಗ ಗಂಭೀರ ವಿಷಯವಾಗಿ ಉಳಿದಿಲ್ಲ. ಈಗ ರಾಜಕೀಯ ಕುಸಿಯುತ್ತಿದೆ. ಗುಣಾತ್ಮಕ ರಾಜಕಾರಣ ಮರೆಯಾಗುತ್ತಿದೆ. ಜನ ಎಚ್ಚೆತ್ತುಕೊಳ್ಳದಿದ್ದರೆ ದೇಶ ಅರಾಜಕತೆಗೆ ಸಿಲುಕುತ್ತದೆ. ಜನ ಮೌಲ್ಯಯುತ ರಾಜಕಾರಣಕ್ಕೆ ಬೆಂಬಲ ಕೊಡುವವರೆಗೆ, ಭ್ರಷ್ಟರನ್ನು ದೂರ ಇರಿಸುವವರೆಗೆ ದೇಶ ಉದ್ಧಾರ ಆಗುವುದಿಲ್ಲ. ಜನಪರ ರಾಜಕಾರಣ ಮಾಡಲು ಸಾಧ್ಯವಿಲ್ಲ ಎಂದರು.

**ಗಾಡ್‌ಫಾದರ್ ಇಲ್ಲ:** ಎಚ್.ಎಂ. ರೇವಣ್ಣ ಜನಪರ ರಾಜಕಾರಣಿ. ಅವರು ಮತ್ತಷ್ಟು ಜನ ಮುಖಿಯಾಗಿ ಕೆಲಸ ಮಾಡಲಿ. ನಾನು ಇನ್ನೂ ರಾಜಕೀಯ ಕ್ಷೇತ್ರದಲ್ಲಿ ಮುಂದುವರಿಯಬೇಕು ಎಂದುಕೊಂಡಿದ್ದೇನೆ. ರೇವಣ್ಣ ಸಹ ರಾಜಕಾರಣದಲ್ಲಿ ಮುಂದುವರಿಯಲಿ. ರಾಜಕೀಯ ಹಿನ್ನೆಲೆ, ಗಾಡ್‌ಫಾದರ್ ಇಲ್ಲದೆ ನಾನು ಮತ್ತು ರೇವಣ್ಣ ಇಷ್ಟು ಬೆಳವಣಿಗೆಯಾಗಿವುದು ಮಹತ್ವದ ಸಾಧನೆ ಎಂದರು.

ನನಗೆ ರಾಜಕೀಯ ಆಸಕ್ತಿ ಬಂದಿದ್ದು ರೈತ ನಾಯಕ ಪ್ರೊ. ನಂಜುಂಡಸ್ವಾಮಿ ಅವರಿಂದ. ಆ ಬೆಳವಣಿಗೆ ಆಗಿರದಿದ್ದರೆ ನಾನು ಮುಖ್ಯ ಮಂತ್ರಿ ಆಗುತ್ತಿರಲಿಲ್ಲ, ನಿಮ್ಮ ಪ್ರೀತಿ-ವಿಶ್ವಾಸಗಳಿಸಲು ಸಾಧ್ಯವಾಗುತ್ತಿರಲಿಲ್ಲ.



ಬ್ರಾಹ್ಮಣ ಯುವತಿಯರು ಬೇರೆ ಜಾತಿಯ ಹುಡುಗರನ್ನು ಮದುವೆಯಾಗದಂತೆ ನೀಡಿರುವ ಕರೆ ಖಂಡನೀಯ. ಅಂತಹ ಮದುವೆಗಳು ಪ್ರೀತಿಯಿಂದ ಆಗುತ್ತವೆ. ಅದನ್ನು ಯಾರಿಂದಲೂ ತಡೆಯುವುದು ಅಸಾಧ್ಯ. ಈಗಿನ ತುರ್ತು ದೇವಾಲಯ ಕಟ್ಟುವುದಲ್ಲ, ಆಸ್ಪತ್ರೆಗಳ ನಿರ್ಮಾಣ ಮತ್ತು ಜನೋಪಯೋಗಿ ಕೆಲಸಗಳನ್ನು ಮಾಡಬೇಕಿದೆ.

– **ಬಿ.ಟಿ. ಲಲಿತಾ ನಾಯಕ್** ಮಾಜಿ ಸಚಿವೆ

ನಾನು ಎಷ್ಟೇ ಬೆಳೆದರೂ ನಾನು ಮಾಗಡಿ ರೇವಣ್ಣನೆ ಹೊರೆತು ಬೆಂಗಳೂರಿನ ರೇವಣ್ಣ ಅಲ್ಲ. ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಹೋರಾಟವನ್ನು ಮುಂದುವರಿಸುತ್ತೇನೆ.

– **ಎಚ್.ಎಂ. ರೇವಣ್ಣ** ಮಾಜಿ ಸಚಿವ

ಅವಕಾಶಗಳನ್ನು ಬಳಸಿಕೊಂಡವರು ಮಾತ್ರ ನಾಯಕರಾಗುತ್ತಾರೆ. ರಾಜಕಾರಣಕ್ಕೆ ಬರುವವರಿಗೆ ಸಿದ್ಧಾಂತದ ಸ್ಪಷ್ಟತೆ ಇರಬೇಕು. ಹಣ, ಅಧಿಕಾರಕ್ಕಾಗಿ ರಾಜಕೀಯಕ್ಕೆ ಬರಬಾರದು ಎಂದರು.

**ಸಮಾಜ ನಿರ್ಮಾಣದ ಗುರಿ:** ಅಸಮಾನತೆ ತೊಲಗಿಸುವುದು ಸಮ ಸಮ ಸಮಾಜ ನಿರ್ಮಾಣದ ಗುರಿಯಾಗಿದೆ. ರಾಜಕಾರಣಿಗಳಿಗೆ ಸಾಮಾಜಿಕ ನ್ಯಾಯದ ಬಗ್ಗೆ ಪರಿಕಲ್ಪನೆ ಇರಬೇಕು. ಇಂದಿರಾಗಾಂಧಿ ಅವರಿಗೆ ಆ ಗುರಿ ಇತ್ತು. ಸ್ಪಷ್ಟತೆ ಹೊಂದಿದ್ದರು. ನಾವು ಏನೇ ಹೇಳಿದರೂ ಜಾತಿ ವಾಸ್ತವವಾಗಿದೆ. ಜಾತಿ ವ್ಯವಸ್ಥೆ ಗಟ್ಟಿಯಾಗಿದೆ. ಜಾತಿ ವ್ಯವಸ್ಥೆ ಹೋಗದೆ ಬದಲಾವಣೆ ಅಸಾಧ್ಯ. ಅದರ ಬೇರುಗಳನ್ನು ಕತ್ತರಿಸಲು ನಾವು ಮುಂದಾಗಬೇಕು. ಎಲ್ಲರಿಗೂ ಸಮಾನ ಅವಕಾಶಗಳು ಸಿಕ್ಕಾಗ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ರೇವಣ್ಣ ಅವರೊಂದಿಗಿನ ಸ್ನೇಹವನ್ನು ಸ್ಮರಿಸಿದರು. ಇತ್ತೀಚಿನ ದಿನಗಳಲ್ಲಿ ಪಕ್ಷಗಳ ಆಚೆಗೆ ರಾಜಕಾರಣಿಗಳ ನಡುವೆ ಸ್ನೇಹ ಉಳಿಯುವುದು ಕಷ್ಟ ಅನ್ನಿಸುತ್ತಿದೆ. ಆದರೆ ರೇವಣ್ಣ ಅತ್ಯಂತ ಸ್ನೇಹಮಹಿ ನಾಯಕ ಎಂದು ವರ್ಣಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಹಿರಿಯ ಕವಿ ಸಿದ್ದಲಿಂಗಯ್ಯ, ಬೆಂಗಳೂರು ವಿವಿ ಮಾಜಿ ರಿಜಿಸ್ಟಾರ್ ಪ್ರೊ.ಬಿ.ಕೆ. ರವಿ ಇದ್ದರು.